ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಟೆಂಡರ್ ಅರ್ಜಿ

## ಕೆಲಸದ ಹೆಸರು

## ಇಲಾಖೆಯ ಸಾಧನೆಗಳ ಕುರಿತು ಸಾಕ್ಷಚಿತ್ರ ನಿರ್ಮಾಣ

**<u>ಟೆಂಡರ್ ಸೂಚಿಕೆ</u>**


1. ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ
2. ಟೆಂಡರ್ ಪ್ರಕಟಣೆ
3. ಟೆಂಡರ್ ನಿಬಂಧನೆಗಳು ಮತ್ತು ಷರತ್ತುಗಳು
4. ಟೆಂಡರ್ ತಪಶೀಲು

# ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ

| | | | |
|---|---|---|---|
| 1. | ಟೆಂಡರ್ ಪ್ರಕಟಣೆಯ ದಿನಾಂಕ | - | 03.02.2018 |
| 2. | ಟೆಂಡರ್ ಡಾಕ್ಯೂಮೆಂಟ್ ಪಡೆಯುವ ದಿನಾಂಕ | - | 03.02.2018 |
| 3. | ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ | - | 12.02.2018 |
| 4. | ಬಿಡ್ ತೆರೆಯುವ ದಿನಾಂಕ, ವೇಳೆ ಮತ್ತು ಸ್ಥಳ | - | 14.02.2018 |

ವೇಳೆ: 3.00ಗಂಟೆ ಅಪರಾಹ್ನ

ಸ್ಥಳ: ಅಂತರಂಗ ಸಭಾಂಗಣ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-560 002

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560 002. ದೂರವಾಣಿ ಸಂ:080-22213530

---

DKC-22014/1/2018 ದಿನಾಂಕ:01.02.2018

**ಟೆಂಡರ್ ಪ್ರಕಟಣೆ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಳೆದ ಐದು ವರ್ಷಗಳ ಸಾಧನೆಗಳ ಕುರಿತು 25-30 ನಿಮಿಷಗಳ ಸಾಕ್ಷಚಿತ್ರ ನಿರ್ಮಿಸಲು ನಮೂನೆಯಲ್ಲಿ 1 ಬಿಡ್ ವಿಧಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

**ಸೇವೆಗಳ ಸಂಕ್ಷಿಪ್ತ ವಿವರ**

| | | | |
|---|---|---|---|
| 1. | ಸಾಕ್ಷಚಿತ್ರ ನಿರ್ಮಾಣ | - | ಇಲಾಖೆಯಿಂದ ಕಳೆದ ಐದು ವರ್ಷಗಳಲ್ಲಿ ಕೈಗೊಳ್ಳಲಾದ ಸಾಹಿತ್ಯಕ ಹಾಗು ಸಾಂಸ್ಕೃತಿಕ ಚಟುವಟಿಕೆಗಳ ವೈಶಿಷ್ಟತೆಯನ್ನು ಬಿಂಬಿಸುವ ಸಾಕ್ಷಚಿತ್ರ ನಿರ್ಮಾಣ |
| 2. | ಸಾಕ್ಷಚಿತ್ರದ ಅಂದಾಜು ಮೊತ್ತ | - | 5,00,000/- |
| 3. | ಇ.ಎಂ.ಡಿ ಮೊತ್ತ | - | 12,500/- |
| 4. | ಟೆಂಡರ್ ಪ್ರಕಟಣೆಯ ದಿನಾಂಕ | - | 03.02.2018 |
| 5. | ಟೆಂಡರ್ ಡಾಕ್ಯೂಮೆಂಟ್ ಪಡೆಯುವ ದಿನಾಂಕ | - | 03.02.2018 |
| 6. | ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ | - | 12.02.21108 |
| 7. | ಬಿಡ್ ತೆರೆಯುವ ದಿನಾಂಕ, ವೇಳೆ ಮತ್ತು ಸ್ಥಳ | - | 14.02.2108<br>ವೇಳೆ: 3.00ಗಂಟೆ ಅಪರಾಹ್ನ<br>ಸ್ಥಳ: ಅಂತರಂಗ ಸಭಾಂಗಣ ಕನ್ನಡ ಭವನ, ಜೆ.ಸಿ.ರಸ್ತೆ ಬೆಂಗಳೂರು-560 002 |

(ಎನ್.ಆರ್.ವಿಶುಕುಮಾರ್)

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಬೆಂಗಳೂರು

# ಟೆಂಡರ್ ಷರತ್ತುಗಳು ಮತ್ತು ನಿಬಂಧನೆಗಳು

1] ಸಾಕ್ಷಚಿತ್ರದ ಕನಿಷ್ಟ ಅವಧಿ 25-30 ನಿಮಿಷಗಳು.

2] ದೂರದರ್ಶನದಲ್ಲಿ ಪ್ರಸಾರ ಮಾಡಲು MPEG ,ಹೆಚ್.ಡಿ. ಹಾಗೂ ಡಿ.ವಿ.ಕ್ಯಾಮ್ ಟೇಪ್ ನಲ್ಲಿ ಪ್ರದರ್ಶನ ಪ್ರತಿಯನ್ನು ಒದಗಿಸುವುದು.

3] ಟೆಂಡರ್‌ದಾರರು ಈ ಸಾಕ್ಷ್ಯಚಿತ್ರ ನಿರ್ಮಾಣ ಕಾರ್ಯದಲ್ಲಿ ತೊಡಗುವ ನಿರ್ದೇಶಕರು, ಛಾಯಾಗ್ರಾಹಕರು, ಸಂಕಲನಕಾರರು, ಸಂಗೀತ ನಿರ್ದೇಶಕರು, ಕಂಠದಾನ ಕಲಾವಿದರು, ಸಂಪನ್ಮೂಲ ವ್ಯಕ್ತಿಗಳ ಹೆಸರುಗಳನ್ನು ಇಲಾಖೆಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

4] ಟೆಂಡರ್‌ದಾರರು ಸಾಕ್ಷ್ಯಚಿತ್ರದ ಸ್ಕ್ರಿಪ್ಟ್ ರಚನೆಯನ್ನು ಇಲಾಖೆಯಿಂದ ಅನುಮೋದಿಸಿಕೊಂಡ 10 ದಿನಗಳೊಳಗಾಗಿ ಚಿತ್ರೀಕರಿಸಿ, ರಫ್ ಕಟ್ ಅನ್ನು ಇಲಾಖೆಗೆ ಸಲ್ಲಿಸತಕ್ಕದ್ದು.

5] ಅಂತಿಮವಾಗಿ ಸಾಕ್ಷ್ಯಚಿತ್ರವನ್ನು ಇಲಾಖೆಗೆ:

ಅ] ಎಚ್.ಡಿ - 1080*1920 ರೆಸಲ್ಯೂಷನ್ ವೃತ್ತಿಪರ ಕ್ಯಾಮರಾ ಉಪಯೋಗ ಮಾಡಿ ಚಿತ್ರೀಕರಿಸಬೇಕು.

ಆ] ಕ್ಯಾಮ್ ಫಾರ್ಮೆಟ್ ನ ಸ್ಟ್ಯಾಂಡರ್ಡ್ ಟೇಪ್ ನಲ್ಲಿ ಮಿಕ್ಸಡ್ ವರ್ಷನ್ ಒಂದು ಪ್ರತಿಯನ್ನು ನೀಡತಕ್ಕದ್ದು.

ಇ] ಈ ಸಾಕ್ಷ್ಯಚಿತ್ರದ ಎಚ್.ಡಿ.ಫಾರ್ಮೆಟ್ 10 ಡಿವಿಡಿಗಳ ಪ್ರತಿಗಳನ್ನು ಇಲಾಖೆಗೆ ನೀಡತಕ್ಕದ್ದು.

ಈ] ಈ ಕ್ಯಾಸೆಟ್ ಹಾಗೂ ಡಿವಿಡಿಗಳ ಮೇಲೆ ವಿಷಯಕ್ಕೆ ಪೂರಕವಾಗಿರುವ ಸೂಕ್ತ ಲೇಬಲ್ ಮಾಡಿ, ರೀಡಿಂಗ್ ನಮೂದಿಸಿ ನೀಡಬೇಕು,

6] ಕರಾರುದಾರರು ಸಾಕ್ಷ್ಯಚಿತ್ರದಲ್ಲಿ ಬೇರೆ ಯಾವುದೇ ವ್ಯಕ್ತಿ/ಸಂಸ್ಥೆಗಳ ದಾಸ್ತಾನು ಚಿತ್ರಿಕೆ/ಛಾಯಾಚಿತ್ರ/ವಿಡಿಯೋ ಕ್ಲಿಪಿಂಗ್ಸ್ ಗಳನ್ನು ಬಳಸಿದ್ದಲ್ಲಿ ಅಂತಹ ವ್ಯಕ್ತಿ/ಸಂಸ್ಥೆಗಳಿಂದ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯವಾಗಿ ಪಡೆದು ಇಲಾಖೆಗೆ ಸಲ್ಲಿಸಬೇಕು.

7] ಕರಾರುದಾರರು ಸಾಕ್ಷ್ಯಚಿತ್ರದ ನಿರ್ದೇಶನ/ನಿರ್ಮಾಣ ಕಾರ್ಯವನ್ನು ಕಾರ್ಯಾದೇಶದಲ್ಲಿ ಯಾವ ಸಂಸ್ಥೆ/ವ್ಯಕ್ತಿಗೆ ನೀಡಿದೆಯೋ ಅವರೇ ಖುದ್ದಾಗಿ ನಿರ್ದೇಶನ ಕಾರ್ಯವನ್ನು ನಿರ್ವಹಿಸತಕ್ಕದ್ದು. ಈ ಕಾರ್ಯವನ್ನು ಬೇರೆಯವರಿಗೆ ಹಸ್ತಾಂತರಿಸುವಂತಿಲ್ಲ/ ಉಪಗುತ್ತಿಗೆ ನೀಡುವಂತಿಲ್ಲ. ಸಾಕ್ಷ್ಯಚಿತ್ರದಲ್ಲಿನ ಯಾವುದೇ ಚಿತ್ರಿಕೆಯನ್ನು ಇಲಾಖೆಯ ಲಿಖಿತ ಅನುಮತಿಯಿಲ್ಲದೆ ಬೇರೆಯವರಿಗೆ ನೀಡತಕ್ಕದಲ್ಲ. ಸದರಿ ಸಾಕ್ಷ್ಯಚಿತ್ರದ ಹಕ್ಕುದಾರಿಕೆ ಇಲಾಖೆಯದಾಗಿರುತ್ತದೆ.

8] ಮಾಸ್ಟರ ಕ್ಯಾಸೆಟ್ ಅನ್ನು ಇಲಾಖೆಯ ತಜ್ಞ ಸಮಿತಿಯು ವೀಕ್ಷಿಸಿ, ಒಪ್ಪಿದ ನಂತರ ಸಾಕ್ಷ್ಯಚಿತ್ರ ನಿರ್ಮಾಣದ ಮೊತ್ತವನ್ನು ಕರಾರುದಾರರಿಗೆ ಆರ್.ಟಿ.ಜಿ.ಎಸ್. ಮೂಲಕ ಪಾವತಿಸಲಾಗುವುದು. ಯಾವುದೇ ಕಾರಣಕ್ಕೂ ಮುಂಗಡ ಮೊತ್ತವನ್ನು ಇಲಾಖೆಯಿಂದ ಪಾವತಿಸುವುದಿಲ್ಲ.

9] ಸಾಕ್ಷ್ಯಚಿತ್ರವು ನಿರೀಕ್ಷಿತ ಗುಣಮಟ್ಟದಲ್ಲಿ ಇಲ್ಲದಿದ್ದರೆ ಅದನ್ನು ಯಾವುದೇ ಕಾರಣವನ್ನು ನೀಡದೇ ತಿರಸ್ಕರಿಸುವ ಅಧಿಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರದ್ದಾಗಿರುತ್ತದೆ.

10] ಈ ಕಾರ್ಯಕ್ಕೆ ಸಂಬಂಧಿಸಿದಂತೆ, ಯಾವುದೇ ಕಾನೂನು ತೊಡಕು/ವ್ಯಾಜ್ಯಗಳು ಬಂದಲ್ಲಿ ಅವುಗಳ ಇತ್ಯರ್ಥವು ಬೆಂಗಳೂರು ನಗರ ನ್ಯಾಯಾಲಯ ವ್ಯಾಪ್ತಿಗೆ ಒಳಪಡುತ್ತವೆ.

11] ಈ ತಕರಾರು ಒಪ್ಪಂದಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರಕ್ಕೆ ಯಾವುದೇ ಬಾಕಿ ಇದ್ದಲ್ಲಿ ಅಂತಹ ಬಾಕಿ ಮೊತ್ತವನ್ನು ವಸೂಲು ಮಾಡಲಾಗುವುದು. `

12] ಸಂಸ್ಥೆಯು ಕನಿಷ್ಟ ದರಪಟ್ಟಿ ನೀಡಿದ ಮಾತ್ರಕ್ಕೆ ಅದೇ ಸಂಸ್ಥೆಯನ್ನು ಒಪ್ಪಬೇಕಂತಿಲ್ಲ. ಸಂಸ್ಥೆಯ ಹಿಂದಿನ ಸಾಕ್ಷಚಿತ್ರಗಳಲ್ಲಿನ ಗುಣಮಟ್ಟ ಹಾಗು ವಿಶಿಷ್ಟತೆಗಳು ಪ್ರಮುಖವಾಗಿ ಪರಿಗಣಿಸಲಾಗುತ್ತದೆ. ಹಾಗು ಸಂಸ್ಥೆಗಳಲ್ಲಿ ನೀಡಿದ ಕನಿಷ್ಟದರದಲ್ಲಿ ಉತ್ತಮ ಗುಣಮಟ್ಟದ ಸಾಕ್ಷಚಿತ್ರ ನಿರ್ಮಿಸಿದ ಸಂಸ್ಥೆಯು ಸದರಿ ದರದಲ್ಲಿ ಕಾರ್ಯನಿರ್ವಹಿಸಲು ಒಪ್ಪಿದಲ್ಲಿ ಸದರಿ ಸಂಸ್ಥೆಗೆ ಕಾರ್ಯಾದೇಶ ನೀಡುವ ಅಧಿಕಾರ ಇಲಾಖೆಗೆ ಇರುತ್ತದೆ.

13] ಟೆಂಡರ್‌ನೊಂದಿಗೆ ಈ ಮುಂದಿನ ದಾಖಲೆಗಳು ಹಾಗು ಸಾಕ್ಷಚಿತ್ರದ ಪ್ರತಿ ಲಗತ್ತಿಸಬೇಕು

1. ನಿಗದಿತ ಅರ್ಜಿ ನಮೂನೆ
2. ಕಳೆದ ಮೂರು ಇಲಾಖೆಯ ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಸಾಕ್ಷಚಿತ್ರ ನಿರ್ಮಾಣ ಮಾಡಿರುವ ಸಂಬಂಧಿತ ಇಲಾಖೆಯ ಅಥವಾ ಸಂಸ್ಥೆಯ ಪ್ರಮಾಣಪತ್ರಗಳು ( ಕನಿಷ್ಟ ಎರಡು)
3. ಕಳೆದ ವರ್ಷದ ಆದಾಯ ತೆರಿಗೆ ಸಲ್ಲಿಸಿದ ರಿಟರ್ನ್ಸ್ ಪ್ರತಿ
4. GST ನೊಂದಣಿ ಪತ್ರ
5. ಹಿಂದೆ ನಿರ್ಮಿಸಿದ ಎರಡು ಸಾಕ್ಷಚಿತ್ರಗಳ ಸಿ.ಡಿ.ಪ್ರತಿಗಳು
6. ಸಾಕ್ಷಚಿತ್ರ ನಿರ್ಮಾಣಕ್ಕೆ ಬಳಸುವ ಕ್ಯಾಮರಾ
7. ಸಂಸ್ಥೆಯ ದರಪಟ್ಟಿ.

**ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 5 ವರ್ಷಗಳ ಸಾಧನೆಗಳ ಕುರಿತು ಸಾಕ್ಷಚಿತ್ರ ನಿರ್ಮಾಣಕ್ಕೆ ಪ್ರತಿಷ್ಠಿತ ನಿರ್ದೇಶಕರಿಂದ ಆಸಕ್ತಿ ವ್ಯಕ್ತಪಡಿಸುವಿಕೆ (Expression of interest) ಅರ್ಜಿ.**

| ಕ್ರ.ಸಂ. | ಕೋರಿರುವ ಮಾಹಿತಿ | ಮಾಹಿತಿ ವಿವರ |
|---|---|---|
| 1 | ನಿರ್ದೇಶಕರ ಹೆಸರು, ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿಳಾಸ | |
| 2 | ನಿರ್ದೇಶಕರ ಅನುಭವ, ನಿರ್ದೇಶಿಸಿರುವ ಸಾಕ್ಷಚಿತ್ರದ ವಿವರ, ಕಾರ್ಯದೇಶದ ಪ್ರತಿ, ರಾಜ್ಯ ಪ್ರಶಸ್ತಿ, ರಾಷ್ಟ್ರ ಪ್ರಶಸ್ತಿ ಪಡೆದಿರುವುದರ ವಿ | |
| 3 | ಉದ್ದೇಶಿತ ವಿಶೇಷ ವ್ಯಕ್ತಿ ಚಿತ್ರ/ಸಾಕ್ಷ್ಯ ಚಿತ್ರದ ಪರಿಕಲ್ಪನೆ/ಸಾರಾಂಶ/ಚಿತ್ರಕಥೆ ಲಗತ್ತಿಸುವುದು | |
| 4 | ವಿಶೇಷ ವ್ಯಕ್ತಿಚಿತ್ರ/ಸಾಕ್ಷಚಿತ್ರದ ನಿರ್ಮಾಣದಲ್ಲಿ ತೊಡಗಿಸಿಕೊಳ್ಳುವ ನಿರ್ಮಾಣ ತಂಡದ ತಾಂತ್ರಿಕ ಸದಸ್ಯರ ಪಟ್ಟಿ ಹಾಗೂ ಅವರ ಅನುಭವ ಮತ್ತು ವಿವರಗಳನ್ನು ನಮೂದಿಸುವುದು | |
| 5 | ಬಳಸಲಾಗುವ ಕ್ಯಾಮರಾ / ಪರಿಕರಗಳ ವಿವರ | |
| 7 | ವಿಶೇಷ ವಿಶೇಷತೆಗಳಿದಲ್ಲಿ ನಮೂದಿಸುವುದು | |

ಈ ಅರ್ಜಿಯಲ್ಲಿ ನಮೂದಿಸಿರುವ ಅಂಶಗಳನ್ನು ನಾನೇ ಖುದ್ದು ಪರಿಶೀಲಿಸಿ ಬೆರಳಚ್ಚು ಮಾಡಿಸಲಾಗಿದೆ ಎಂದು, ಮತ್ತು ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ ಎಂದು ಪ್ರಾಮಾಣಿಕರಿಸುತ್ತೇನೆ.

ಸ್ಥಳ:

ದಿನಾಂಕ : ಅರ್ಜಿದಾರರ ಸಹಿ/-